**ಸಾಕ್ಷಿಗೆ ದಿನಾಂಕ 09.09.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.ಎನ್ ಎಂ ಪಿ ವಕೀಲರಿಂದ:**

1. ದೂರನ್ನು ಭೀಮಣ್ಣ ಎನ್ನುವವರು ನೀಡಿರುತ್ತಾರೆ. ಭೀಮಣ್ಣ ಎನ್ನುವವರು ಅಪಘಾತದ ದಿನ ನನ್ನ ಜೊತೆ ಇರಲಿಲ್ಲ. ಭೀಮಣ್ಣನವರಿಗೆ ಅಪಘಾತದ ಕುರಿತು ನಾನೇ ಹೇಳಿರುತ್ತೇನೆ. ದೂರನ್ನು ಒಂದು ದಿನ ತಡವಾಗಿ ನೀಡಿಲ್ಲ. ದಾಖಲೆಗಳ ಪ್ರಕಾರ ಒಂದು ದಿನ ತಡವಾಗಿ ದೂರ ನೀಡಲಾಗಿದೆ ಎಂದರೆ ಸರಿ. ನಾನು ಹೋಗುತ್ತಿದ್ದ ಬುಲೆರೋ ವಾಹನ ಚಂದ್ರಣ್ಣ ಎನ್ನುವವರಿಗೆ ಸೇರಿರುತ್ತದೆ. ಚಂದ್ರಣ್ಣರವರ ಸುಮಾರು ವರ್ಷಗಳಿಂದ ಪರಿಚಯ ಇರುತ್ತಾರೆ. ಬುಲೆರೋ ವಾಹನಕ್ಕೆ ವಿಮಾ ಪಾಲಿಸಿ ಮತ್ತು ಅದರ ಚಾಲಕನಿಗೆ ಡಿಎಲ್ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸುತ್ತೀರಾ ಎಂದರೆ ಹಾಜರುಪಡಿಸುತ್ತೇನೆ.

2. ಅಪಘಾತದ ದಿನ ನಾನು, ತೇಜನಾಯಕ್ ಮತ್ತು ಚಾಲಕ ಸತೀಶ್ ಪ್ರಯಾಣಿಸುತ್ತಿದ್ದೇವು. ನಾನು ಹಿಂದಿನ ಭಾಗದಲ್ಲಿ ಕುಳಿತಿದ್ದೇನು. ವಾಹನ ಖಾಲಿ ಇತ್ತು ಎಂದರೆ ಸರಿ. ಚಾಲಕ ಸತೀಶ್ ಊರಿಗೆ ಹೋಗಬೇಕು ಎಂಬ ಭರದಲ್ಲಿ ವೇಗವಾಗಿ ವಾಹನವನ್ನು ಚಲಾಯಿಸುತ್ತಿದ್ದನು ಎಂದರೆ ಸರಿಯಲ್ಲ. ಅಪಘಾತಪಡಿಸಿದ ನಂತರ ಬಸ್ಸು ಸ್ಥಳದಲ್ಲಿ ಇತ್ತು. ಅಪಘಾತವು ಬುಲೆರೋ ವಾಹನದ ಚಾಲಕನ ನಿರ್ಲಕ್ಷ್ಯದಿಂದ ಉಂಟಾಗಿದೆ ಎಂದರೆ ಸರಿಯಲ್ಲ. ಅಪಘಾತವು ರಸ್ತೆಯ ಮಧ್ಯಭಾಗದಲ್ಲಿ ಆಗಿದೆ ಎಂದರೆ ಸರಿಯಲ್ಲ. ಬಲೋರೋ ವಾಹನಕ್ಕೆ ವಿಮಾ ಪಾಲಿಸಿ ಮತ್ತು ಅದರ ಚಾಲಕನಿಗೆ ಡಿಎಲ್ ಇರದೇ ಇರುವುದರಿಂದ ಬಸ್ಸನ್ನು ಸುಳ್ಳಾಗಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. ಚಂದ್ರಣ್ಣ ರವರು ನನಗೆ ಪರಿಹಾರ ನೀಡಬಾರದು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಚಂದ್ರಣ್ಣನವರನ್ನು ಈ ಪ್ರಕರಣದಲ್ಲಿ ಪಕ್ಷಗಾರನನ್ನಾಗಿ ಮಾಡಲು ತೊಂದರೆ ಇಲ್ಲ.

**ಎರಡನೇ ಎದುರುದಾರರ ಪರ ವಕೀಲರು ಕಾಲಾವಕಾಶ ಕೋರಿರುತ್ತಾರೆ. ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶವನ್ನು ನೀಡಲಾಗಿರುತ್ತದೆ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**